# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 974(1306)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ರಾಜ್ಯದ ಗ್ರಂಥಾಲಯಗಳಿಗೆ ಒದಗಿಸುವ ಪುಸ್ತಕ ಆಯ್ಕೆ, ಖರೀದಿಯಲ್ಲಿನ ಅಕ್ರಮ ತಡೆ ಬಗ್ಗೆ

(ಅ) ರಾಜ್ಯದಲ್ಲಿರುವ ಸರ್ಕಾರಿ ಗ್ರಂಥಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಸದರಿ ಗ್ರಂಥಾಲಯಗಳಿಗೆ ವಿವಿಧ ವಿಷಯಗಳ ಪುಸ್ತಕಗಳ ಆಯ್ಕೆ, ಸರಬರಾಜು ನಿಟ್ಟಿನಲ್ಲಿ ಸರ್ಕಾರವು ಅನುಸರಿಸುತ್ತಿರುವ ಮಾನದಂಡ ಹಾಗೂ ನಿಯಮಾವಳಿಗಳೇನು; (ಮಾಹಿತಿ ಒದಗಿಸುವುದು)

(ಇ) ಕಳೆದ 3 ವರ್ಷಗಳ ಅವಧಿಯಲ್ಲಿ ವಿವಿಧ ಲೇಖಕರ ಪ್ರಕಾಶನ ಸಂಸ್ಥೆಗಳಿಂದ ಖರೀದಿಸಲಾದ ಪುಸ್ತಕಗಳ ಪ್ರಮಾಣ ಎಷ್ಟು; (ಪಾವತಿಸಲಾದ ಅನುದಾನ, ಪ್ರಕಾಶನ ಸಂಸ್ಥೆ, ಪ್ರಕಾಶಕರ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಈ) ಸರ್ಕಾರವು ಖರೀದಿಸುವ ಪುಸ್ತಕಗಳ ಆಯ್ಕೆ ಖರೀದಿ, ಪುಟಗಳ ಗುಣಮಟ್ಟದಲ್ಲಿ ವ್ಯಾಪಕ ಭ್ರಷ್ಟಾಚಾರ, ಅಧಿಕಾರಿಗಳ ಸ್ವಹಿತಾಸಕ್ತಿ ಕುರಿತ ದೂರುಗಳ ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)